# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 512
**ಸದಸ್ಯರ ಹೆಸರು** : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ)
**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
**ಉತ್ತರಿಸಬೇಕಾದ ದಿನಾಂಕ** : 30.01.2026.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಎರಡು ವರ್ಷಗಳಿಂದ ಜಿಲ್ಲೆಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಇರುವ ಸಾಂತ್ವನ ಕೇಂದ್ರ'ಗಳಿಗೆ ಸಮರ್ಪಕವಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೇ; | ಕಳೆದ ಎರಡು ವರ್ಷಗಳಿಂದ ಜಿಲ್ಲೆಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಇರುವ ಸಾಂತ್ವನ ಕೇಂದ್ರಗಳಿಗೆ ಬಿಡುಗಡೆ ಮಾಡಲಾಗಿರುವ ಅನುದಾನದ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಅಲ್ಲಿನ ಸಿಬ್ಬಂದಿಗಳಿಗೆ ವೇತನವನ್ನು ನಿಗದಿತ ಅವಧಿಯಲ್ಲಿ ಪಾವತಿಸಲಾಗಿದೆಯೇ; ಇಲ್ಲದಿದ್ದಲ್ಲಿ ಪಾವತಿಸಲು ಬಾಕಿ ಇರುವ ಮೊತ್ತ ಎಷ್ಟು; | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ ಸಾಂತ್ವನ ಕೇಂದ್ರದಲ್ಲಿನ ಸಿಬ್ಬಂದಿಗಳಿಗೆ ವೇತನವನ್ನು ನಿಗದಿತ ಅವಧಿಯಲ್ಲಿ ಪಾವತಿಸಲು ಕ್ರಮವಹಿಸಲಾಗಿದೆ. |
| ಇ) | ಮಹಿಳೆಯರ ಸುರಕ್ಷತೆಗಾಗಿ ಕೈಗೊಂಡಿರುವ ಕ್ರಮಗಳೇನು? | <u>**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**</u><br><br>ಸಂಕಷ್ಟ, ದೌರ್ಜನ್ಯಕ್ಕೊಳಗಾದ ಮಹಿಳೆಯರ ರಕ್ಷಣೆ ಹಾಗೂ ತುರ್ತು ನೆರವಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ಅಕ್ಕ ಪಡೆ<br>2. ಒನ್ ಸ್ಟಾಪ್ ಸೆಂಟರ್<br>3. ಮಹಿಳಾ ಸಹಾಯವಾಣಿ-181<br>4. ಶಕ್ತಿ ಸದನ<br>5. ಸಖಿ ನಿವಾಸ್<br>6. ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ<br>7. ಸಾಂತ್ವನ<br><br>ಮೇಲಿನ ಯೋಜನೆಗಳ ಸಂಕ್ಷಿಪ್ತ ವಿವರವನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ.<br><br><u>**ಕರ್ನಾಟಕ ರಾಜ್ಯ ಮಹಿಳಾ ಆಯೋಗ**</u><br><br>ಮಹಿಳೆಯರ ಸುರಕ್ಷತೆಗಾಗಿ ಜಾರಿಗೊಳಿಸಿರುವ ಸುರಕ್ಷತಾ ಕ್ರಮಗಳ ವಿವರ:<br>• ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ)ಅಧಿನಿಯಮ 2013.<br>• ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005, ನಿಯಮ 2006.<br>• ವರದಕ್ಷಿಣೆ ನಿಷೇಧ ಅಧಿನಿಯಮ 1961. |

| | | |
|---|---|---|
| | | • ಕರ್ನಾಟಕ ವಿವಾಹಗಳ ನೋಂದಣಿ ಅಧಿನಿಯಮ 1976.<br>• ಹಿಂದೂ ವಿವಾಹ ಕಾಯ್ದೆ 1955. ವಿವಾಹ ವಿಚ್ಛೇಧನ ಪಡೆಯುವ ಹಕ್ಕು.<br>• ಕಲಂ 13.<br>• ಮಹಿಳೆಯರನ್ನು ಅಸಭ್ಯ ರೀತಿಯಲ್ಲಿ ಪ್ರತಿಬಿಂಬಿಸುವ ವಿರುದ್ಧ ಕ್ರಮ ಕೈಗೊಳ್ಳುವ ಅಧಿನಿಯಮ 1986.<br>• ಮಹಿಳೆಯರನ್ನು ಅಕ್ರಮ ಸಾಗಾಣಿಕೆ ನಿಷೇಧ ಕಾಯ್ದೆ 1956.<br>• ಕರ್ನಾಟಕ ದೇವದಾಸಿ ನಿರ್ಭಂದಿಸುವ ಅಧಿನಿಯಮ 1982.<br><br>ರಾಜ್ಯದಲ್ಲಿ ಮಹಿಳೆಯರ ರಕ್ಷಣೆಗಾಗಿ ರೂಪಿಸಿರುವ ಕಾನೂನುಗಳ ಬಗ್ಗೆ ಕಾನೂನು ಅರಿವು ಕಾರ್ಯಕ್ರಮದ ಮೂಲಕ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ಸುರಕ್ಷತೆಗಾಗಿ ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತ್ ಮಟ್ಟದಲ್ಲಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಕಾನೂನು ಸೇವಾ ಪ್ರಾಧಿಕಾರದಿಂದ ಕಾನೂನು ಅರಿವು ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ.<br><br>**ಸೇಫ್ ಸಿಟಿ ಯೋಜನೆ:** ನಿರ್ಭಯಾ ನಿಧಿಯಡಿ ಬೆಂಗಳೂರು ನಗರದಲ್ಲಿ ಸಾವಿರಾರು "ಸಿಸಿಟಿವಿ ಕ್ಯಾಮೆರಾಗಳು", ನಿಗಾ ವ್ಯವಸ್ಥೆ, ಪ್ಯಾನಿಕ್ ಬಟನ್‌ಗಳು, ಜಿ.ಐ.ಎಸ್. ಆಧಾರಿತ ಅಪರಾಧ ನಿಗಾ ವ್ಯವಸ್ಥೆ ಅಳವಡಿಸಲಾಗಿದೆ.<br><br>ರಸ್ತೆ ದೀಪಗಳು ಮತ್ತು ನಿಗಾ ವ್ಯವಸ್ಥೆ, ಸಾರ್ವಜನಿಕ ಸ್ಥಳಗಳಲ್ಲಿ ಬೆಳಕು ಮತ್ತು ಕ್ಯಾಮೆರಾಗಳನ್ನು ಹೆಚ್ಚಿಸಿ ಅಪರಾಧ ತಡೆಯುವ ಕ್ರಮ.<br><br>**ಪೊಲೀಸ್ ಮತ್ತು ತುರ್ತು ಪ್ರತಿಕ್ರಿಯೆ ವ್ಯವಸ್ಥೆ:**<br><br>• 1091 ಮಹಿಳಾ ಸಹಾಯವಾಣಿ: ಮಹಿಳೆಯರ ಮೇಲಿನ ಹಿಂಸೆ, ಕಿರುಕುಳ ದೂರುಗಳಿಗೆ 24x7 ಸೇವೆ.<br>• 112 ಡಯಲ್ 100 – ತುರ್ತು ಪೊಲೀಸ್ ಸಹಾಯ<br>• ಅಕ್ಕ ಪಡೆ / ಅಕ್ಕ ಸ್ಕ್ವಾಡ್<br>• ಬಸ್ ನಿಲ್ದಾಣ, ಶಾಲೆ, ಕಾಲೇಜು, ಮಾರುಕಟ್ಟೆ, ಸಾರ್ವಜನಿಕ ಸ್ಥಳಗಳಲ್ಲಿ ಮಹಿಳಾ ಪೊಲೀಸ್/ಹೋಂ ಗಾರ್ಡ್ ತಂಡಗಳ ನಿಯೋಜನೆ.<br><br>**ತಂತ್ರಜ್ಞಾನ ಆಧಾರಿತ ಸುರಕ್ಷತೆ:**<br><br>• ಸುರಕ್ಷಾ ಆಪ್: ಅಪಾಯದ ಸಂದರ್ಭದಲ್ಲಿ ತುರ್ತು ಸಂದೇಶವನ್ನು ಪೊಲೀಸ್ ಇಲಾಖೆಗೆ ಕಳುಹಿಸಬಹುದು.<br>• ಸಾರ್ವಜನಿಕ ಸಾರಿಗೆಯಲ್ಲಿ ಪ್ಯಾನಿಕ್ ಬಟನ್‌ಗಳು<br>• ಕೆ.ಎಸ್.ಆರ್.ಟಿ.ಸಿ ಸೇರಿದಂತೆ ಬಸ್‌ಗಳಲ್ಲಿ ಮಹಿಳಾ ಸುರಕ್ಷತೆಗಾಗಿ ಕ್ರಮ<br>• ವಾಹನ ಟ್ರ್ಯಾಕಿಂಗ್ ವ್ಯವಸ್ಥೆ - ಪ್ರಯಾಣದ ಸಮಯದಲ್ಲಿ ನಿಗಾ.<br><br>**ಕಾನೂನು ಮತ್ತು ನ್ಯಾಯ ಕ್ರಮಗಳು:**<br><br>• ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳಿಗೆ ತ್ವರಿತ ತನಿಖೆ ಮತ್ತು ವಿಚಾರಣೆ.<br>• ಸ್ಥಳೀಯ ಕಾವಲು ಸಮಿತಿಗಳು |

| | | |
|---|---|---|
| | | **ಮಹಿಳೆಯರಿಗೆ ಬೆಂಬಲ ಕೇಂದ್ರಗಳು:**<br><br>ಸಾಂತ್ವನ ಕೇಂದ್ರಗಳು: ಗೃಹ ಹಿಂಸೆ, ಲೈಂಗಿಕ ದೌರ್ಜನ್ಯ ಪೀಡಿತ ಮಹಿಳೆಯರಿಗಾಗಿ ಈ ಕೆಳಗಿನ ಸೌಲಭ್ಯಗಳು:<br><br>1. ಕಾನೂನು ಸಹಾಯ<br>2. ಮನೋವೈದ್ಯಕೀಯ ಸಲಹೆ<br>3. ತಾತ್ಕಾಲಿಕ ಆಶ್ರಯ<br>4. ಸ್ವಾಧಾರ ಗೃಹಗಳು: ಸಂಕಷ್ಟದಲ್ಲಿರುವ ಮಹಿಳೆಯರಿಗೆ ಆಶ್ರಯ ಮತ್ತು ಪುನರ್ ವಸತಿ.<br>5. ಉಜ್ವಲ ಯೋಜನೆ: ಮಾನವ ಕಳ್ಳಸಾಗಣೆ ತಡೆ ಮತ್ತು ಪುನರ್ವಸತಿ.<br><br>**ಜಾಗೃತಿ ಮತ್ತು ಶಿಕ್ಷಣ:**<br><br>• ಶಾಲೆ, ಕಾಲೇಜು, ಬಸ್ ನಿಲ್ದಾಣಗಳಲ್ಲಿ ಮಹಿಳಾ ಹಕ್ಕುಗಳು, ಸ್ವಯಂ ರಕ್ಷಣೆ, ಸೈಬರ್ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮಗಳು, ಸಮುದಾಯ ಮಟ್ಟದಲ್ಲಿ ಮಹಿಳಾ ಸುರಕ್ಷಾ ಅರಿವು.<br><br>**ಮಹಿಳಾ ಸಬಲೀಕರಣ ಕ್ರಮ:**<br><br>• ಶಕ್ತಿ ಯೋಜನೆ: ರಾಜ್ಯ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ, ಇದರಿಂದ ಸುರಕ್ಷಿತ ಸಂಚಾರ ಮತ್ತು ಸ್ವಾವಲಂಬನೆ.<br><br>ಮಹಿಳೆಯರ ಭದ್ರತೆ, ಗೌರವ ಮತ್ತು ಸ್ವತಂತ್ರ ಬದುಕಿಗೆ ಸಹಕಾರಿಯಾಗಿದೆ. |

**ಸಂಖ್ಯೆ: ಮಮಇ 26 ಮಮಅ 2026**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

| ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 442(512) ಕ್ಕೆ ಅನುಬಂಧ-1 | | | |
|---|---|---|---|
| **2 ವರ್ಷದ ಸಾಂತ್ವನ ಯೋಜನೆಗಾಗಿ ನಿರ್ದೇಶನಾಲಯದಿಂದ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರ** | | | |
| **ಕ್ರ. ಸಂ.** | **ಜಿಲ್ಲೆಯ ಹೆಸರು** | **2023-24** | **2024-25** |
| | | **ಬಿಡುಗಡೆಯಾದ ಮೊತ್ತ** | **ಬಿಡುಗಡೆಯಾದ ಮೊತ್ತ** |
| 1 | ಬೆಂಗಳೂರು ನಗರ | 3371460 | 3788976 |
| 2 | ಚಾಮರಾಜ ನಗರ | 2444484 | 2541984 |
| 3 | ಬೆಳಗಾಂ | 9315440 | 9743943 |
| 4 | ಗದಗ | 3724000 | 3174480 |
| 5 | ಉಡುಪಿ | 1341240 | 1611192 |
| 6 | ಬೆಂಗಳೂರು (ಗ್ರಾ) | 2241984 | 2541984 |
| 7 | ರಾಮನಗರ | 2357984 | 2541984 |
| 8 | ಚಿಕ್ಕಬಳ್ಳಾಪುರ | 3622976 | 3806976 |
| 9 | ಕೋಲಾರ | 2575820 | 2529984 |
| 10 | ತುಮಕೂರು | 6052800 | 6336480 |
| 11 | ಮೈಸೂರು | 4887968 | 4825968 |
| 12 | ಮಂಡ್ಯ | 3610976 | 3979000 |
| 13 | ಕೊಡಗು | 1237228 | 1256496 |
| 14 | ಹಾಸನ | 4771968 | 5369841 |
| 15 | ಶಿವಮೊಗ್ಗ | 3622976 | 2914657 |
| 16 | ಕೊಪ್ಪಳ | 2990480 | 3174240 |
| 17 | ಚಿತ್ರದುರ್ಗ | 3622976 | 3939759 |
| 18 | ದಾವಣಗೆರೆ | 2357984 | 2500496 |
| 19 | ಚಿಕ್ಕಮಗಳೂರು | 4255472 | 4427342 |
| 20 | ದಕ್ಷಿಣ ಕನ್ನಡ | 2990480 | 3174480 |
| 21 | ಧಾರವಾಡ | 3622976 | 3775250 |
| 22 | ಹಾವೇರಿ | 4139472 | 4376736 |
| 23 | ವಿಜಯಪುರ | 3672480 | 3806976 |
| 24 | ಬಾಗಲಕೋಟೆ | 2874480 | 3174480 |
| 25 | ಉತ್ತರ ಕನ್ನಡ | 7259080 | 6969456 |
| 26 | ರಾಯಚೂರು | 2935400 | 3174250 |
| 27 | ಬೀದರ್ | 2990480 | 3174240 |
| 28 | ಕಲಬುರ್ಗಿ | 4887968 | 4570221 |
| 29 | ಬಳ್ಳಾರಿ | 1725488 | 1909488 |
| 30 | ವಿಜಯನಗರ | 2990480 | 3412272 |
| | **ಒಟ್ಟು** | **108495000** | **112523631** |

**ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 442(512) ಕ್ಕೆ ಅನುಬಂಧ-2**

**ಮಹಿಳಾ ಕಲ್ಯಾಣ ಯೋಜನೆಗಳು**

1) **ಅಕ್ಕ ಪಡೆ**: ಅಕ್ಕ ಪಡೆ ಯೋಜನೆಯನ್ನು ರಾಜ್ಯದ 31 ಜಿಲ್ಲೆಗಳಲ್ಲಿ ಹಾಗೂ 5 ಪೊಲೀಸ್ ಕಮೀಷನರೇಟ್ ಗಳಲ್ಲಿ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ 2025-26ನೇ ಸಾಲಿನಿಂದ ಅಧಿಕೃತವಾಗಿ ಅನುಷ್ಠಾನಗೊಳಿಸಲಾಗಿದೆ. ರಾಜ್ಯದಲ್ಲಿ ಮಹಿಳೆಯರು ಮತ್ತು ಮಕ್ಕಳಲ್ಲಿ ಕಾನೂನು ಅರಿವು, ಜಾಗೃತಿ ಶಿಕ್ಷಣ ನೀಡುವುದರ ಜೊತೆಗೆ ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣದ ರಕ್ಷಣೆ/ ನೆರವು ನೀಡುವ ಉದ್ದೇಶದಿಂದ 'ಅಕ್ಕ ಪಡೆ' ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಸಹಾನುಭೂತಿ ಮತ್ತು ಸಮುದಾಯ ಸೇವೆಯಲ್ಲಿ ಚಾಲಿತವಾಗಿರುವ ಅಕ್ಕ, ಪಡೆಗಳು ಜಿಲ್ಲಾ ಕೇಂದ್ರಸ್ಥಾನದಲ್ಲಿ ಪ್ರತಿನಿತ್ಯ ಶಾಲೆ, ಕಾಲೇಜು, ಮಹಿಳಾ ಹಾಸ್ಟೆಲ್‌ಗಳು ರೈಲ್ವೆ ಸ್ಟೇಷನ್ ಬಸ್ ನಿಲ್ದಾಣ ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಗಸ್ತು (Patrolling ಸಂಚರಿಸುವ ಮೂಲಕ ಸಮಾಜದಲ್ಲಿ ಸ್ಪಂದಿಸುವ ಸುರಕ್ಷತಾ ಘಟಕವಾಗಿ ಮತ್ತು ಶೈಕ್ಷಣಿಕ ಶಕ್ತಿಯಾಗಿ ಕಾರ್ಯನಿರ್ವಹಿಸಲಿವೆ.

2) **ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ನಿಯಮ 2006 :** ರಾಜ್ಯವು 2006 ರಿಂದ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಇದು ಮುಖ್ಯವಾಗಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವ ಉದ್ದೇಶದಿಂದ, ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಪ್ರಮುಖ ಹೆಜ್ಜೆಯಾಗಿದೆ. ಕಾಯ್ದೆಯ ಅನುಷ್ಠಾನದಲ್ಲಿ ಸಹಕರಿಸಲು ರಾಜ್ಯಾದ್ಯಂತ 116 ಸ್ವಯಂ ಸೇವಾ ಸಂಸ್ಥೆಗಳನ್ನು ಸೇವಾ ಸಂಸ್ಥೆಗಳೆಂದು ಗುರುತಿಸಲಾಗಿದೆ.

ರಾಜ್ಯದಲ್ಲಿ ಪ್ರಸ್ತುತ ಒಟ್ಟು 47 ತಾಲ್ಲೂಕುಗಳಲ್ಲಿ ಮಾತ್ರ ಸಂರಕ್ಷಣಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ ತಾಲ್ಲೂಕುಗಳಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳೇ, ಸಂರಕ್ಷಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾ ಮಟ್ಟದಲ್ಲಿ 31 ಜಿಲ್ಲೆಗಳ ಉಪನಿರ್ದೇಶಕರು ಸಂರಕ್ಷಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

3) **ಉದ್ಯೋಗಸ್ಥ ಮಹಿಳಾ ವಸತಿ ನಿಲಯ ಯೋಜನೆ**: ಮಹಿಳಾ ಮತ್ತು ಮಕ್ಕಳ ಇಲಾಖೆಯ ವತಿಯಿಂದ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಮಂಗಳೂರು, ದಕ್ಷಿಣ ಕನ್ನಡ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ 23 ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಪ್ರಾರಂಭಿಸಲಾಗಿದೆ. ಗಾರ್ಮೆಂಟ್ಸ್, ಕೈಗಾರಿಕೆಗಳು ಮತ್ತು ಇತರ ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರ ದುಡಿಯುವ ಮಹಿಳೆಯರಿಗೆ ಆದ್ಯತೆ ಮೇರೆಗೆ ಸೌಲಭ್ಯ ನೀಡಲಾಗುತ್ತಿದೆ.

4) **ಸಾಂತ್ವನ: (2000-2001):** ಸಮಾಜದಲ್ಲಿ ವರದಕ್ಷಿಣೆ ಕಿರುಕುಳ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಆಪ್ತಸಮಲೋಚನೆ ನೀಡಿ ಅಗತ್ಯವಿದ್ದಲ್ಲಿ ಸೂಕ್ತ ಪ್ರಾಧಿಕಾರವಾದ ಪೊಲೀಸ್, ಕಾನೂನು ಇಲಾಖೆಗೆ ರವಾನಿಸಲಾಗುವುದು. ಪ್ರಸ್ತುತ ರಾಜ್ಯದಲ್ಲಿ 176 ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

5) **ಕೇಂದ್ರ ಸರ್ಕಾರದ ಒನ್ ಸ್ಟಾಪ್ ಸೆಂಟರ್ (ಸಖಿ):** ಕೇಂದ್ರದ ಪಾಲು : 100% - ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೋಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ಸಮಗ್ರ ಸೇವೆಗಳನ್ನು ಒಂದೇ ಸೂರಿನಡಿ ನೀಡಲಾಗುತ್ತಿದೆ. ರಾಜ್ಯದ 31 ಜಿಲ್ಲೆಗಳಲ್ಲಿ ಒಟ್ಟು 40 ಒನ್ ಸ್ಟಾಪ್ ಸೆಂಟರ್ ಕಾರ್ಯನಿರ್ವಹಿಸುತ್ತಿವೆ.

6) **ಮಹಿಳಾ ಸಹಾಯವಾಣಿ – 181:** ಮಹಿಳೆಯರಿಗೆ ಮಾಹಿತಿಯನ್ನು ನೀಡಲು, ದೌರ್ಜನ್ಯ ಮತ್ತು ಸಂಕಷ್ಟದಲ್ಲಿರುವ ಮಹಿಳೆಯರಿಗೆ ತುರ್ತು ನೆರವನ್ನು ಒದಗಿಸುವ ನಿಟ್ಟಿನಲ್ಲಿ ಮಹಿಳಾ ಸಹಾಯವಾಣಿ-181 ಎಂಬ ಉಚಿತ ದೂರವಾಣಿ ಸೇವೆಯನ್ನು ಕಾರ್ಯಗತಗೊಳಿಸಿ ತುರ್ತು ಪ್ರತಿಕ್ರಿಯೆ ಬೆಂಬಲ ವ್ಯವಸ್ಥೆ (ERSS)-112 ರೊಂದಿಗೆ ಸಂಯೋಜಿಸಲು WCD Control Room ನ್ನು C-DAC ಸಂಸ್ಥೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸೇವೆಯನ್ನು ದಿನದ 24X7 ಗಂಟೆಗಳು ರಾಜ್ಯಾದ್ಯಂತ ಒದಗಿಸಲಾಗುತ್ತಿದೆ.

7) **ಶಕ್ತಿ ಸದನ (ಸ್ವಾಧಾರಗೃಹ ಮತ್ತು ಉಜ್ವಲ):** ಗೃಹ ಯೋಜನೆಯ ಮುಖ್ಯ ಉದ್ದೇಶ ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಆಶ್ರಯ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರನ್ನಾಗಿ ಮಾಡುವುದಾಗಿರುತ್ತದೆ. ಉಜ್ವಲ ಯೋಜನೆಯು ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟಲು ಹಾಗೂ ಸಾಗಾಣಿಕೆ ಮತ್ತು ವಾಣಿಜ್ಯ ಲೈಂಗಿಕ ದುರುಪಯೋಗಕ್ಕೆ ಒಳಪಟ್ಟವರನ್ನು ರಕ್ಷಿಸಲು ಮತ್ತು ಪುನರ್ವಸತಿ ಕಲ್ಪಿಸಲು ಹಾಗೂ ಇವರುಗಳ ಕುಟುಂಬದವರೊಂದಿಗೆ ಪುನರ್‌ವಿಲೀನಗೊಳಿಸುವ ಉದ್ದೇಶವನ್ನು ಹೊಂದಿರುತ್ತದೆ.

ಈ ಎರಡು ಯೋಜನೆಗಳನ್ನು ಸಂಯೋಜಿಸಿ, 50 ನಿವಾಸಿಗಳಿಗೆ ವಾಸ್ತವ್ಯ ಮತ್ತು ವಿವಿಧ ಸೌಲಭ್ಯ ನೀಡಲಾಗುವ 'ಶಕ್ತಿ ಸದನ'-ಸಮಗ್ರ ಪರಿಹಾರ ಮತ್ತು ಪುನರ್ವಸತಿ ಗೃಹಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಸೇವೆ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.